# ವಿದ್ಯಾರ್ಥಿಗಳಿಗೆ ವೈದ್ಯಕೀಯ ಮಾನವೀಯತೆ ಬೋಧಿಸಿ

## ಕೋಲಾರದಲ್ಲಿ ಯುನೆಸ್ಕೋ ಬಯೋಎಥಿಕ್ಸ್ ವಲಯ ಮುಖ್ಯಸ್ಥ ಡಾ. ರಸೆಲ್ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಕೋಲಾರ

ವೈದ್ಯಕೀಯ ಮಾನವೀಯತೆಯನ್ನು ಬೋಧಿಸಬೇಕಿದೆ ಎಂದು ಯುನೆಸ್ಕೋ ಬಯೋಎಥಿಕ್ಸ್ ಘಟಕದ ಏಷ್ಯಾ ಫೆಸಿಫಿಕ್ ವಲಯ ಮುಖ್ಯಸ್ಥ ಡಾ. ರಸೆಲ್ ಹೇಳಿದರು.

ನಗರದ ಟಮಕದ ಶ್ರೀದೇವರಾಜ ಅರಸು ಅಕಾಡೆಮಿಯ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಜೈವಿಕ ನೀತಿಶಾಸ್ತ್ರದ ಯುನೆಸ್ಕೊ ಘಟಕದ ಕೋಲಾರ ವಿಭಾಗವನ್ನು ಬುಧವಾರ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಅರಸು ವಿಶ್ವವಿದ್ಯಾಲಯಕ್ಕೆ ಘಟಕ ಆರಂಭದ ಪತ್ರ ಹಸ್ತಾಂತರಿಸಿ ಮಾತನಾಡಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯತೆ ಅತಿ ಮುಖ್ಯ. ಮಾನವೀಯತೆ ಇಲ್ಲದ ಸೇವೆ ಸೇವೆ ಎನಿಸಿಕೊಳ್ಳಲಾರದು. ಈ ನಿಟ್ಟಿನಲ್ಲಿ ಜೈವಿಕ ನೀತಿಶಾಸ್ತ್ರದ ಘಟಕ ನೇರವಾಗಲಿದೆ ಎಂದು ಅಭಿಪ್ರಾಯಪಟ್ಟರು.

ನಾಗಪುರದ ದತ್ತ ಮೇಘ ವೈದ್ಯಕೀಯ ಶಿಕ್ಷಣ ಸಂಸ್ಥೆ ಉಪಕುಲಪತಿ ಡಾ. ವೇದಪ್ರಕಾಶ್ ಮಿಶ್ರ ಮಾತನಾಡಿ, ಜೀವನ ಕೌಶಲಗಳು ಕಲಿಕೆಯ ಭಾಗವಾಗಿರಬೇಕು 'ಹಾಗೂ ಸಂಸ್ಕಾರಯುತ ನೀತಿ ತಿಳಿಸಬೇಕು ಎಂದರು.




ಕೋಲಾರದ ಶ್ರೀದೇವರಾಜ ಅರಸು ಅಕಾಡೆಮಿಯ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಜೈವಿಕ ನೀತಿಶಾಸ್ತ್ರದ ಯುನೆಸ್ಕೊ ಘಟಕದ ಕೋಲಾರ ವಿಭಾಗವನ್ನು ಡಾ. ರಸೆಲ್ ಉದ್ಘಾಟಿಸಿದರು. ಉಪಕುಲಪತಿ ಡಾ. ಜಿ. ಪ್ರದೀಪ್‌ಕುಮಾರ್ ಇತರರು ಇದ್ದರು.

ವೈದ್ಯಕೀಯ ಮಹಾವಿದ್ಯಾಲಯ ಉಪಕುಲಪತಿ ಡಾ. ಜಿ. ಪ್ರದೀಪ್‌ಕುಮಾರ್, ಮಣಿಪಾಲ್ ಕೆಎಂಸಿಯ ಪೆಥಾಲಜಿ ಪ್ರೊಫೆಸರ್ ಮೇರಿ ಮ್ಯಾಥ್ಯೂ, ಚೆನ್ನೈನ ಡಾ. ಎಂಜಿಆರ್ ಎಜುಕೇಷನಲ್ ಮತ್ತು ಸಂಶೋಧನಾ ಸಂಸ್ಥೆ ಉಪ ಕುಲಪತಿ ಡಾ. ಎಸ್. ಗೀತಾಲಕ್ಷ್ಮೀ, ಪ್ರೊ. ಪ್ರಾಂಕೋ ಡಿಸೋಜಾ, ಕಾಲೇಜಿನ ಕುಲಸಚಿವ ಡಾ. ಕೆ.ಎನ್. ವಿ. ಪ್ರಸಾದ್, ಘಟಕ ಮುಖ್ಯಸ್ಥೆ ಡಾ. ಆರ್. ಸಂಧ್ಯಾ, ಎ.ವಿ.ಎಂ. ಕುಟ್ಟಿ, ಡಾ. ಸಿ.ಕೆ. ರಾಜನ್ , ಡಾ.ಶ್ರೀನಿವಾಸರೆಡ್ಡಿ, ಡಾ. ಕಲ್ಯಾಣಿ, ಡಾ. ಅಶ್ವಿನಿಶೆಟ್ಟಿ , ಪರೀಕ್ಷಾ ನಿಯಂತ್ರಕ ಡಾ. ಮುನಿನಾರಾಯಣ, ವೈದ್ಯಕೀಯ ಅಧೀಕ್ಷಕ ಡಾ. ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಶ್ರೀರಾಮಲು ಇತರರು ಉಪಸ್ಥಿತರಿದ್ದರು.

ಕೋಲಾರಪತ್ರಿಕೆ



ದೇವರಾಜ ಅರಸು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಜೈವಿಕ ನೀತಿಶಾಸ್ತ್ರ ಘಟಕ ಕಾರ್ಯಾರಂಭ

# ವೈದ್ಯಕೀಯ ಶಿಕ್ಷಣದಲ್ಲಿ ಜೈವಿಕ ನೀತಿಶಾಸ್ತ್ರ ಅಳವಡಿಕೆ ಅಗತ್ಯ:ಡಿಸೋಜ





ಕೋಲಾರ ಜು ೧೭

ವೈದ್ಯಕೀಯ ಶಿಕ್ಷಣದ ಬೋಧನೆ ಜೊತೆಗೆ ಜೈವಿಕ ನೀತಿಶಾಸ್ತ್ರ ಅಧ್ಯಯನ ಅಳವಡಿಕೆ ಅಗತ್ಯವಾಗಿದೆಯೆಂದೂ, ರೋಗಿಗಳ ಮತ್ತು ಕುಟುಂಬದವರ ಆರೋಗ್ಯದ ಸಮಗ್ರ ಹಿತಾಸಕ್ತಿ ರಕ್ಷಿಸಲು ಆರೋಗ್ಯ ಸೇವಾ ಕಾರ್ಯಕರ್ತರು ಜೈವಿಕ ನೀತಿಶಾಸ್ತ್ರ ಕಲಿಯುವುದು ಮುಖ್ಯವಾಗಿದೆಎಂದು ಪ್ರೊ॥ ಫ್ರಾಂಕೋ ಡಿಸೌಜ ಅಭಿಪ್ರಾಯಿಸಿದರು.

ನಗರದ ಹೊರವಲಯದ ಟಮಕದ ಶ್ರೀದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವಿಶ್ವವಿದ್ಯಾಲಯದ ಬಯೋ ಎಥಿಕ್ಸ್ ಘಟಕಕ್ಕೆ ಗಿಡಕ್ಕೆ ನೀರು ಹಾಕುವುದರ ಮೂಲಕ ಚಾಲನೆ ನೀಡಿದ ಹೈಫಾದಲ್ಲಿರುವ ಯುನೆಸ್ಕೋ ಬಯೋಎಥಿಕ್ಸ್ ಘಟಕದ ಏಷ್ಯಾ ಪೆಸಿಫಿಕ್ ವಲಯದ ಮುಖ್ಯಸ್ಥರಾದ ಡಾ॥ ರಸೆಲ್ ಅವರು ಈಗ ವೈದ್ಯಕೀಯ ಮಾನವೀಯತೆಯನ್ನು ಬೋಧಿಸಬೇಕಾಗಿದೆ. ಅವರಿಗೆ ಈ ಘಟಕ ನೆರವಾಗಲಿದೆ ಎಂದು ನುಡಿದರು

ವಿ.ವಿ. ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಕುಲಪತಿ ಡಾ॥ ಜಿ. ಪ್ರದೀಪ್ ಕುಮಾರ್ ಸ್ವಾಗತಿಸಿದರು. ನಾಗಪುರದ ದತ್ತ ಮೇಘ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಪ್ರೋ ಚಾನ್ಸಲರ್, ಡಾ॥ ವೇದಪ್ರಕಾಶ್ ಮಿಶ್ರ ಅವರು ಬದುಕು ಗೌರವಿಸುವುದನ್ನು ಕಲಿಯಬೇಕು. ಹಾಗೆ ಕಲಿಯುವುದನ್ನು ಗೌರವಿಸುವ ಬದುಕು ಅಗತ್ಯ. ಜೀವನ ಕೌಶಲ್ಯಗಳು ಕಲಿಕೆಯ ಭಾಗವಾಗಿರಬೇಕು ಹಾಗೂ. ಸಂಸ್ಕಾರಯುತ ನೀತಿಗಳನ್ನು ತಿಳಿಸಬೇಕು ಎಂದು ವಿಶ್ಲೇಷಿಸಿದರು.

ಮಣಿಪಾಲ್ ಕೆಎಂಸಿಯ ಪೆಥಾಲಜಿ ಪ್ರೊಫೆಸರ್ ಮೇರಿ ಮ್ಯಾಥ್ಯೂ ಅವರು ಮುಖ್ಯ ಅತಿಥಿಯಾಗಿದ್ದು, ಬಯೋ ಎಥಿಕ್ಸ್ ಬೋಧನೆಯು ವೈದ್ಯಕೀಯ ಶಿಕ್ಷಣದ ಪ್ರಮುಖ ಬದಲಾವಣೆ ಆಗಲಿದೆ ಎಂದರು. ಗುರು-ಶಿಷ್ಯ ಪರಂಪರೆಯನ್ನು ಕಾಪಾಡಿಕೊಂಡು ಬರಬೇಕು. ಬಯೋ ಎಥಿಕ್ಸ್ ಅನ್ನು ಕಲಿಸಲು ಕಾರ್ಯಾಗಾರಗಳನ್ನು ನಡೆಸಬೇಕೆಂದು ಚೆನ್ನೈನ ಡಾ॥ ಎಂಜಿಆರ್ ಎಜುಕೇಷನಲ್ ಮತ್ತು ಸಂಶೋಧನಾ ಸಂಸ್ಥೆಯ ಉಪ ಕುಲಪತಿ ಡಾ॥ ಎಸ್. ಗೀತಾಲಕ್ಷ್ಮಿ ಅವರು ನುಡಿದರು. ಪ್ರತಿ ವರ್ಷ ಅಕ್ಟೋಬರ್ ೧೯ ಅನ್ನು ವಿಶ್ವ ಬಯೋ ಎಥಿಕ್ಸ್ ದಿನ ಆಚರಿಸಲಾಗುವುದೆಂದು ತಿಳಿಸಲಾಯಿತು.

ಅರಸು ವಿಶ್ವವಿದ್ಯಾಲಯಕ್ಕೆ ಘಟಕ ಆರಂಭದ ಪತ್ರವನ್ನು ಡಾ॥ ರಸೆಲ್ ಅವರು ಉಪ ಕುಲಪತಿ ಡಾ॥ ಪ್ರದೀಪ್ ಕುಮಾರ್ ಅವರಿಗೆ ನೀಡಿದರು. ಕಾಲೇಜಿನ ಕುಲಸಚಿವ ಡಾ॥ ಕೆ. ಎನ್.ವಿ. ಪ್ರಸಾದ್ ಹಾಗೂ ಡಾ॥ ಆರ್. ಸಂಧ್ಯಾ ಅವರನ್ನು ಘಟಕದ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಗಳಾಗಿ ನೇಮಿಸಲಾಯಿತು. ಪ್ರೋಚಾನ್ಸಲರ್ ಎ.ವಿ.ಎಂ.ಕುಟ್ಟಿ,ಡಾ॥ ಶ್ರೀನಿವಾಸ ರೆಡ್ಡಿ, ಡಾ॥ ಕಲ್ಯಾಣಿ, ಡಾ॥ ಅಶ್ವಿನಿಶೆಟ್ಟಿ ಇತರರು ಘಟಕದಲ್ಲಿ ಇದ್ದಾರೆ. ಪರೀಕ್ಷಾ ನಿಯಂತ್ರಕ ಡಾ॥ ಮುನಿನಾರಾಯಣ, ವೈದ್ಯಕೀಯ ಅಧೀಕ್ಷಕ ಡಾ॥ ಲಕ್ಷ್ಮಯ್ಯ, ಪ್ರಾಚಾರ್ಯ ಡಾ॥ ಶ್ರೀರಾಮುಲು, ಪ್ರೋಚಾನ್ಸಲರ್ ಡಾ॥ ಸಿ.ಕೆ. ರಂಜನ್ ಮತ್ತಿತರರಿದ್ದರು.